ವಿಷಯ : ಮಲಪ್ರಭಾ ಕಾಲುವೆ ಬಗ್ಗೆ ಭೂಸ್ವಾಧೀನ ಹಾಗೂ ಪರಿಹಾರ ನೀಡುವುದು.

ಪ್ರ. 237 (127) ಶ್ರೀ ಆರ್. ವಿ. ಪಾಟೀಲ್ (ಪರಸಗಡ).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

(ಅ) ಸವದತ್ತಿ ತಾಲ್ಲೂಕಿನ ಕಾಗದಾಳ, ಹರಳಕೊಪ್ಪ ಹಾಗೂ ಗೋವಿನಕೊಪ್ಪದಲ್ಲಿನ ಸುಮಾರು 2 ಸಾವಿರ ಎಕರೆ ಜಮೀನು ಮಲಪ್ರಭಾ ಕಾಲುವೆಯಿಂದ ಸವಳು ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ಕಾರಣದಿಂದ ಜಮೀನಿನಲ್ಲಿ ಸಾಗುವಳಿಯಾದ ರೈತರು ಕಷ್ಟದಲ್ಲಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

(ಇ) ಸದರಿ ಭೂಮಾಲೀಕರಿಗೆ ಪರಿಹಾರ ಅಥವಾ ಸೊಸೈಟಿಗಳಿಂದ ಪಡೆದ ಸಾಲವನ್ನು (ಸೊಸೈಟಿ ಲೋನ್, ವಾಟರ್‌ಟ್ಯಾಕ್ಸ್ ಇತ್ಯಾದಿಗಳು) ಮನ್ನಾ ಮಾಡುವ ಸಲಹೆ ಸರ್ಕಾರದವರಲ್ಲಿದೆಯೇ ?

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಶ್ರೀ ವಿ. ಎಲ್. ಪಾಟೀಲ್ ಕಂದಾಯ ಸಚಿವರ ಪರವಾಗಿ).—

(ಅ) ಮಲಪ್ರಭಾ ಬಲದಂಡೆ ಕಾಲುವೆಗೆ ಸಂಬಂಧಿಸಿದ ಕಾಗದಾಳ ಹಳ್ಳಿಯ ಪ್ರದೇಶದಲ್ಲಿ (279 ಎಕರೆ 10 ಗುಂಟೆ) ಮತ್ತು ಗೋವಿನಕೊಪ್ಪ ಹಳ್ಳಿಯ (146 ಎಕರೆ,09 ಗುಂಟೆ) ಪ್ರದೇಶದಲ್ಲಿ ಸವಳು ಆಗಿರುತ್ತದೆ. ಸವದತ್ತಿ ತಾಲ್ಲೂಕಿನಲ್ಲಿ ಭೂಮಿ ಸವಳು ಆದ ಹರಳಕೊಪ್ಪ ಎನ್ನುವ ಹಳ್ಳಿಯು ಇಲ್ಲಾ. ಸವಳು ಮಲಪ್ರಭಾ ನೀರಾವರಿ ಯೋಜನೆ ಕೈಗೊಳ್ಳುವ ಮುಂಚೆಯೇ ಆಗಿತ್ತು.

(ಆ) ಸಾಮಾನ್ಯವಾಗಿ ಮೇಲ್ಲೆ ಹೇಳಿದ ಸವಳು ಪ್ರದೇಶದಲ್ಲಿ ಯಾವುದೇ ಬೆಳೆ ಬೆಳೆಯಲಾಗುವುದಿಲ್ಲ.

(ಇ) ಕಂದಾಯ ಇಲಾಖೆಯಿಂದ ಯಾವ ಪರಿಹಾರವನ್ನೂ ಕೊಡುವುದಿಲ್ಲ ಮತ್ತು ಸೊಸೈಟಿ ಸಾಲವನ್ನೂ ರೈತರಿಗೆ ವಜಾ ಮಾಡಲಾಗುವುದಿಲ್ಲ.

ಶ್ರೀ ಆರ್. ವಿ. ಪಾಟೀಲ್ .—ಸ್ವಾಮಿ, ಮಲಪ್ರಭಾ ಬಲದಂಡೆ ಕಾಲುವೆಗೆ ಸಂಬಂಧಿಸಿದ ಕಾಗದಾಳ ಹಳ್ಳಿಯ ಪ್ರದೇಶದಲ್ಲಿ 279 ಎಕರೆ ಸವಳು ಆಗಿರುತ್ತದೆ ಎಂದು ತಮ್ಮ ಉತ್ತರದಲ್ಲಿ ತಿಳಿಸಿದ್ದೀರಿ. ಕಾಗದಾಳ ಹಳ್ಳಿಯ ಪ್ರದೇಶದಲ್ಲಿ ಸುಮಾರು 700–800 ಎಕರೆ ಪ್ರದೇಶ ಸವಳು ಆಗಿದೆ. ಇನ್ನು ಮುಂದೆ ತಮ್ಮ ಉತ್ತರದಲ್ಲಿ ಸವದತ್ತಿ ತಾಲ್ಲೂಕಿನಲ್ಲಿ ಭೂಮಿ ಸವಳು ಆದ ಹರಳಕೊಪ್ಪ ಎನ್ನುವ ಹಳ್ಳಿಯು ಇಲ್ಲ. ಸವಳು ಮಲಪ್ರಭಾ ನೀರಾವರಿ ಯೋಜನೆ ಕೈಗೊಳ್ಳುವ ಮುಂಚೆಯೇ ಆಗಿತ್ತು ಎಂದು ತಿಳಿಸಿದ್ದೀರಿ. ಈ ಬಗ್ಗೆ 1977 ನೇ ಇಸವಿಯಲ್ಲಿ ಮಾನ್ಯ ಬೊಮ್ಮಾಯಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ನೇಮಿಸಲಾಗಿತ್ತು. ಅವರು ಕಾಗದಾಳ ಗ್ರಾಮಕ್ಕೆ ಬಂದಿದ್ದರು. ಅವರು ಬಂದಿದ್ದಾಗ ಅದನ್ನು ನೋಡಿ, ಬಾಯಿಯಲ್ಲಿ ಸ್ವಲ್ಪ ಹಾಕಿಕೊಂಡು ಇದು ಉಪ್ಪು ಇದೆ ಕ್ಷಾರ ಇದೆ ಎಂದು ಹೇಳಿದ್ದಾರೆ. ಅಲ್ಲಿ ಬಳ್ಳಾರಿ ನಾಗನಗೌಡ ಜಾಲಿ ಬೆಳೆದಿದೆಯಲ್ಲದೆ ಮತ್ತೆ ಏನೂ ಕಾಣುವುದಿಲ್ಲ. ಸಾಮಾನ್ಯವಾಗಿ ಸವಳು ಪ್ರದೇಶದಲ್ಲಿ ಯಾವುದೇ ಬೆಳೆ ಬೆಳೆಯಲಾಗುವುದಿಲ್ಲ ಎಂದು ತಿಳಿಸಿದ್ದೀರಿ. ಇನ್ನು ನನ್ನ (ಇ) ಪ್ರಶ್ನೆಗೆ ಯಾವ ಪರಿಹಾರವನ್ನೂ ಕೊಡಲಾಗುವುದಿಲ್ಲ ಎಂದು ಹೇಳಿದ್ದೀರಿ. ಇವತ್ತು ರೈತರು ಸಹಕಾರ ಸಂಘಗಳಲ್ಲಿ ಸಾಲ ತೆಗೆದುಕೊಂಡಿದ್ದಾರೆ. ಅಲ್ಲಿ ವಿನಾಯಿತಿ ಕೊಡುವುದಿಲ್ಲವೆಂದು ಹೇಳುತ್ತಿದ್ದಾರೆ. ಅಲ್ಲಿ ಸವಳು ಭೂಮಿಯಾದರೂ ಏನೂ ಕ್ರಮ ತೆಗೆದುಕೊಳ್ಳುತ್ತಿಲ್ಲ. ಇವತ್ತು ರೈತರಿಗೆ ಸಹಾಯ ಮಾಡತಕ್ಕ ಸರ್ಕಾರ. ಅಂದಮೇಲೆ ಅವರಿಗೆ ಪರಿಹಾರ ಕೊಡಬೇಕು. ಅವರು ಸಂಘ ಸಂಸ್ಥೆಗಳಲ್ಲಿ ಪಡೆದ ಸಾಲಕ್ಕೆ ವಿನಾಯಿತಿ ಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರು ಅಭಿಪ್ರಾಯ ತಿಳಿಯಿತು. ಅವರ ಪ್ರಶ್ನೆ ಹರಳುಕೊಪ್ಪ, ಗೋವಿನಕೊಪ್ಪ ಎಂದು. ನಾನು ಹೇಳಿದ್ದು ಹರಳುಕೊಪ್ಪ ಎನ್ನುವ ಹಳ್ಳಿಯಲ್ಲಿ. ಇದಕ್ಕೆ ಸರಿಯಾದ ಉತ್ತರವನ್ನು ನಾನು ಕೊಟ್ಟಿದ್ದೇನೆ. ಅಲ್ಲಿ ಸವಳು ಬಂದಿದೆಯೆಂದು ಹೇಳಿದರು. ಅದನ್ನು ನಾವು ಒಪ್ಪಿಕೊಂಡಿದ್ದೇವೆ. ಆದರೆ ಸೊಸೈಟಿಯಿಂದ, ಕಂದಾಯ ಇಲಾಖೆಯಿಂದ ರೈತರ ಸಾಲವನ್ನು ವಸೂಲ್ಮಾಡುವುದಕ್ಕಾಗುವುದಿಲ್ಲ, ಕಾನೂನಿನಲ್ಲಿ ಇದಕ್ಕೆ ಅವಕಾಶ ಇಲ್ಲವೆಂದು ತಿಳಿಸಲಾಗಿದೆ. ಆದರೆ ಕಾಡ (CADA) ಯೋಜನೆಯ ಪ್ರಕಾರ ಸಬ್ಸಿಡಿ ಏನಾದರೂ ಕೊಡುವುದಕ್ಕೆ ಸಾಧ್ಯವೇ ಎಂಬುದನ್ನು ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಆರ್. ವಿ. ಪಾಟೀಲ್.—ತಾವು ಪರಿಹಾರವನ್ನು ಕೊಡುವುದಕ್ಕೆ ಆಗದಿದ್ದರೆ ಆ ಜಮೀನಿನಲ್ಲಿ ಪೀಕು ಬೆಳೆಯುವಂತೆ ಅಲ್ಲಿ ಬಸಿ ಕಾಲುವೆಯನ್ನು ತೆಗೆದು ಅವರಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ .—ಈಗಾಗಲೇ ಮಲಪ್ರಭಾ, ಘಟಪ್ರಭಾ ಕ್ಷೇತ್ರಗಳಲ್ಲಿ ಕೂಡ ಭೂಗರ್ಭ ಇಲಾಖೆಯ ಜೊತೆ ಸಮಾಲೋಚನೆ ನಡೆಸಿ ಬೆಳಗಾಂ ಜಿಲ್ಲೆಯಲ್ಲಿ ಹೆಚ್ಚಿನ ನೀರಿನ ಸಂಗ್ರಹದಿಂದಾಗುವ ಯಾವುದೇ ತೊಂದರೆಯ ನಿವಾರಣೋಪಾಯವನ್ನು ಕಂಡುಹಿಡಿಯಲು ಈಗಾಗಲೇ ಸೂಕ್ತ ಕ್ರಮ ತೆಗೆದುಕೊಳ್ಳಲಾಗಿದೆ. ಈ ಕ್ರಮ ಕೈಗೊಳ್ಳಲು ಬೇಕಾದ ಹಣವನ್ನೂ ಕೂಡ 'ಕಾಡ' ಫಂಡ್‌ನಿಂದ ತೆಗೆದುಕೊಳ್ಳಲು ಸೂಚಿಸಿದ್ದೇವೆ.

ಶ್ರೀ ಆರ್. ವಿ. ಪಾಟೀಲ್.—ನಮ್ಮ ಘಟಪ್ರಭಾ ಪ್ರಾಜೆಕ್ಟ್‌ನಲ್ಲಿ ಅದೂ ಈ ಕಾಗದಾಳ ಕ್ಷೇತ್ರದಲ್ಲಿ ಸವಳು ಆದುದು ಇದೇ ಮೊದಲು. ಇದುವರೆಗೂ ಇದರ ಬಗ್ಗೆ ಯಾವುದೇ ಕ್ರಮವನ್ನೂ ತೆಗೆದುಕೊಂಡಿಲ್ಲ. ನೀರಾವರಿ ಇಲಾಖೆಯವರೂ ಕೂಡ ಬಂದು ಯಾವುದೇ ಸರ್ವೇ ಕೆಲಸವನ್ನೂ ಮಾಡಿಲ್ಲ. ಇಷ್ಟು ಅನಾಹುತ ವಾಗಿದೆಯೆಂದು ತಿಳಿಸಿದರೂ ನಾವು ಬಂದು ನೋಡುತ್ತೇವೆಂದು ಹೇಳುತ್ತಿದ್ದಾರೆ. ಇದಕ್ಕೆ ತಾವು ಏನು ಹೇಳುತ್ತೀರಿ ?

ಶ್ರೀ ಎ. ಲಕ್ಷ್ಮೀಸಾಗರ್.—ಅವರು ಹೋಗಿ ನೋಡದೇ ಇರಬಹುದು. ಆದರೆ ಇದರ ಬಗ್ಗೆ ನಾವು ಒಂದು ತಾತ್ವಿಕ ನಿರ್ಣಯವನ್ನು ತೆಗೆದುಕೊಂಡಿದ್ದೇವೆ.

ವಿಷಯ : ಭರಮಸಾಗರ ವಿಧಾನಸಭಾ ಕ್ಷೇತ್ರದ ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಒದಗಿಸುವ ಬಗ್ಗೆ.

ಪ್ರ. 238 (146) ಶ್ರೀ ಕೆ. ಶಿವಮೂರ್ತಿ (ಭರಮಸಾಗರ).— ಮಾನ್ಯ ಅಬಕಾರಿ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

(ಅ) ಭರಮಸಾಗರ ಕ್ಷೇತ್ರದಲ್ಲಿರುವ ಎಷ್ಟು ಗ್ರಾಮಗಳಿಗೆ ವಿದ್ಯುಚಕ್ತಿ ಒದಗಿಸಲಾಗಿದೆ ಮತ್ತು ವಿದ್ಯುಚ್ಛಕ್ತಿಯನ್ನು ಒದಗಿಸದೇ ಇರುವ ಗ್ರಾಮಗಳ ಸಂಖ್ಯೆ ಎಷ್ಟು;

(ಆ) ಈ ವರ್ಷದಲ್ಲಿ ಎಷ್ಟು ಗ್ರಾಮಗಳಿಗೆ ವಿದ್ಯುತ್ ಪೂರೈಸುವ ಯೋಜನೆ ಇದೆ ಮತ್ತು ಯಾವಾಗ ಪೂರ್ತಿಗೊಳಿಸಲಾಗುವುದು;

(ಇ) ಎಷ್ಟು ದಿವಸದೊಳಗಾಗಿ ವಿದ್ಯುತ್ ಇಲ್ಲದೆ ಇರುವ ಗ್ರಾಮಗಳಿಗೆ ವಿದ್ಯುಚ್ಛಕ್ತಿ ಪೂರೈಸಲಾಗುವುದು?

ಶ್ರೀ ಜೆ. ಹೆಚ್. ಪಟೇಲ್ (ಮಾನ್ಯ ಅಬ್ಕಾರಿ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು) .—

(ಅ) ದಿನಾಂಕ 3–6–1983 ರಲ್ಲಿನ ಅಂಕಿಗಳು. :—
116 ಗ್ರಾಮಗಳಿಗೆ ವಿದ್ಯುಚ್ಛಕ್ತಿ ಒದಗಿಸಿದೆ.
25 ಗ್ರಾಮಗಳಿಗೆ ವಿದ್ಯುಚ್ಛಕ್ತಿ ಒದಗಿಸಿಲ್ಲ.

(ಆ) 17 ಗ್ರಾಮಗಳಿಗೆ :—
ಮಾರ್ಚಿ 1984 ರ ಒಳಗೆ ಪೂರ್ತಿಗೊಳಿಸುವ ಗುರಿಯನ್ನು ಹೊಂದಲಾಗಿದೆ.

(ಇ) ಉಳಿದ 8 ಗ್ರಾಮಗಳಿಗೆ 1984–85 ರಲ್ಲಿ ವಿದ್ಯುತ್ ಒದಗಿಸುವ ಗುರಿ ಹೊಂದಲಾಗಿದೆ.

ಶ್ರೀ ಕೆ. ಶಿವಮೂರ್ತಿ.—ಸ್ವಾಮಿ, ತಮ್ಮ (ಆ) ಉತ್ತರದಲ್ಲಿ 17 ಹಳ್ಳಿಗಳಿಗೆ 1984ರ ಮಾರ್ಚಿ ಯೊಳಗಾಗಿ ವಿದ್ಯುಚ್ಛಕ್ತಿಯನ್ನು ಪೂರೈಸುತ್ತೇವೆಂದು ಹೇಳಿದ್ದೀರಿ. ಆದರೆ ಇದುವರೆಗೆ ನನ್ನ ಕ್ಷೇತ್ರದಲ್ಲಿ ಒಂದು ಹಳ್ಳಿಯನ್ನು ಬಿಟ್ಟರೆ ಬಾಕಿ 16 ಹಳ್ಳಿಗಳಲ್ಲಿ ಕೆಲಸವೇ ಆಗಿಲ್ಲ. ಆದ್ದರಿಂದ ಸರ್ಕಾರದವರನ್ನು ಕೇಳಿ ಕೊಳ್ಳುತ್ತೇನೆ, ಈ 16 ಹಳ್ಳಿಗಳಿಗೂ ಆದಷ್ಟು ಬೇಗ ವಿದ್ಯುಚ್ಛಕ್ತಿಯನ್ನು ಒದಗಿಸುತ್ತೀರಾ ?

ಅಧ್ಯಕ್ಷರು.—ಈಗಾಗಲೇ ಮಾನ್ಯ ಸಚಿವರು ಉತ್ತರದಲ್ಲಿ ತಿಳಿಸಿದ್ದಾರೆ.

ಶ್ರೀ ಜೆ. ಹೆಚ್. ಪಟೇಲ್.—ಒಟ್ಟು 205 ಗ್ರಾಮಗಳ ಪೈಕಿ ಈಗಾಗಲೇ 161 ಗ್ರಾಮಗಳಿಗೆ ವಿದ್ಯುದ್ದೀಕರಣವನ್ನು ಮಾಡಲಾಗಿದೆ. ಈಗ 24 ಗ್ರಾಮಗಳನ್ನು ಕೈಗೆ ತೆಗೆದುಕೊಂಡಿದ್ದೇವೆ. ಆದಷ್ಟು ಬೇಗ ಇನ್ನು ಉಳಿದುವನ್ನೂ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಶಿವಮೂರ್ತಿ.—ಬೇರೆಯವರ ಕ್ಷೇತ್ರದಲ್ಲಿ ಆದಷ್ಟು ಬೇಗ ಕೆಲಸವಾಗುತ್ತದೆ, ಆದರೆ ನನ್ನ ಕ್ಷೇತ್ರದಲ್ಲಿ ಮಾತ್ರ ಏತಕ್ಕೆ ತಡವಾಗುತ್ತದೆ ?

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಅಧ್ಯಕ್ಷರೇ, ಗ್ರಾಮಗಳನ್ನು ತೆಗೆದುಕೊಳ್ಳುವಾಗ ಅದಕ್ಕೆ ಸೇರಿದ ಉಪಗ್ರಾಮಗಳು ಅಂದರೆ ಹ್ಯಾಮ್ಲೆಟ್ಸ್‌ನ್ನು ಬಿಟ್ಟುಬಿಡುತ್ತಾರೆ. ಅಲ್ಲಿ ಹರಿಜನಕೇರಿಗಳು ಇದ್ದರೂ ಕೂಡ ಅದನ್ನೂ ಕೈಬಿಡುತ್ತಾರೆ. ಇದು ತಮಗೂ ಗೊತ್ತಿರಬಹುದು. ಆದ್ದರಿಂದ ಇನ್ನುಮುಂದೆ ಗ್ರಾಮ ಗಳನ್ನು ತೆಗೆದುಕೊಳ್ಳುವಾಗ ತಾಂಡ ಪಗೈರೆಗಳನ್ನು ಸೇರಿಸಿಕೊಳ್ಳುವುದು, ಅಥವಾ ಗ್ರಾಮ ಪಂಚಾಯಿತಿ ಗಳನ್ನು ತೆಗೆದುಕೊಳ್ಳುವಾಗ ಅದಕ್ಕೆ ಸೇರಿದ ಎಲ್ಲ ಗ್ರಾಮಗಳನ್ನೂ ತೆಗೆದುಕೊಳ್ಳುವ ಒಂದು ನೀತಿಯನ್ನು ಅಳವಡಿಸಬೇಕು.

ಶ್ರೀ ಜೆ. ಹೆಚ್. ಪಟೇಲ್.—ಈಗಾಗಲೇ ಸರ್ಕಾರದ ನೀತಿಯಲ್ಲಿ ಇದು ಸೇರಿದೆ. ಇದುವರೆಗೆ ಊರು ಸಣ್ಣದಿದ್ದು ಲಂಬಾಣಿ ತಾಂಡ ದೊಡ್ಡದಿದ್ದರೂ ಅವರು ಊರನ್ನು ಮಾತ್ರ ತೆಗೆದುಕೊಂಡು ತಾಂಡ ವನ್ನು ಬಿಟ್ಟುಬಿಡುತ್ತಿದ್ದರು. ಆದರೆ ಇನ್ನುಮುಂದೆ ನಾವು ಗ್ರಾಮೀಣ ವಿದ್ಯುಚ್ಛಕ್ತಿ ಕಾರ್ಯವನ್ನು ತೆಗೆದು ಕೊಳ್ಳುವಾಗ ಉಪಗ್ರಾಮಗಳನ್ನೂ ತೆಗೆದುಕೊಳ್ಳುತ್ತೇವೆ.

ವಿಷಯ : ಕಾಳೀ ಜಲವಿದ್ಯುತ್ ಯೋಜನೆ ಕುರಿತು.

ಪ್ರ. 239 (149) ಶ್ರೀ ವಿ. ಎಸ್. ಆಚಾರ್ಯ-(ಉಡುಪಿ) .—ಮಾನ್ಯ ಅಬಕಾರಿ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

(ಅ) ಕಾಳೀ ಜಲವಿದ್ಯುತ್ ಯೋಜನೆಯ ಪೂರ್ತಿ ಉತ್ಪಾದನಾ ಸಾಮರ್ಥ್ಯವೆಷ್ಟು ;